ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**Akkamahadevi Women's University, Vijayapura**

ಕುಲಸಚಿವರು (ಮೌಲ್ಯಮಾಪನ) Registrar (Evaluation)

ಜ್ಞಾನಶಕ್ತಿ ಆವರಣ ಅಥಣಿ ರಸ್ತೆ, JnanaShakti Campus Athani Road,

ವಿಜಯಪುರ -586108 Vijayapura-586108

Phone Number: 08352-229023 Fax Number 08352-229123

ಕ್ರ.ಸಂಖ್ಯೆ:ಅಮವಿವಿ/ಪರೀಕ್ಷಾ/ಬಿ.ಎಡ್/ಥೇರಿ/2018-19/186 ದಿನಾಂಕ: 22.11.2018

## ಪರಿಷ್ಕೃತ ಅಧಿಸೂಚನೆ

ವಿಷಯ:2019 ಜನೇವರಿ ತಿಂಗಳಲ್ಲಿ ಬಿ.ಎಡ್. ದ್ವಿತೀಯ ಹಾಗೂ ನಾಲ್ಕನೇ ಸೆಮಿಸ್ಟರ್ ಥೇರಿ ಪರೀಕ್ಷೆ ಜರುಗಿಸುವ ಕುರಿತು.

ಉಲ್ಲೇಖ:ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.11.2018

2019 ಜನೇವರಿ ತಿಂಗಳಲ್ಲಿ ಜರುಗುವ ಬಿ.ಎಡ್ ಪರೀಕ್ಷೆಗೆ ಅರ್ಜಿಗಳನ್ನು ದಿನಾಂಕ:**27.11.2018** ರಿಂದ ಆನ್‌ಲೈನ್ ಮೂಲಕ ಸ್ವೀಕರಿಸುವ ಹಾಗೂ ಪರೀಕ್ಷೆ ಪ್ರಾರಂಭವಾಗುವ ದಿನಾಂಕದ ಇತರ ವಿವರಗಳನ್ನು ತೋರಿಸುವ ಪಟ್ಟಿ.

| ಪರೀಕ್ಷೆ | ಪರೀಕ್ಷಾ ಶುಲ್ಕಗಳ ವಿವರ | ವಿದ್ಯಾರ್ಥಿನಿಯರು ಕಾಲೇಜಿನಲ್ಲಿ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬೇಕಾದ ಅಂತಿಮ ದಿನಾಂಕ | | ಪ್ರಾಂಶುಪಾಲರು ಪರೀಕ್ಷಾ ಅರ್ಜಿಗಳ ಯಾದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಅಂತಿಮ ದಿನಾಂಕ | ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | |
|---|---|---|---|---|---|---|
| ಬಿ.ಎಡ್ II Sem | ಪರೀಕ್ಷಾ ಶುಲ್ಕ- 850/-<br>ಅಂಕಪಟ್ಟಿ ಶುಲ್ಕ -200/-<br>**ಒಟ್ಟು ಶುಲ್ಕ- 1050/-**<br>**(ರಿಪೀಟರ್ಸ್ ವಿದ್ಯಾರ್ಥಿನಿಯರಿಗೆ ಒಂದು ವಿಷಯಕ್ಕೆ ಶುಲ್ಕ ರೂ.150/-)** | ದಂಡ ಶುಲ್ಕವಿಲ್ಲದೆ | ರೂ. 100/- ದಂಡ ಶುಲ್ಕ ಸಹಿತ | --- | ವಾರ್ಷಿಕ ಪ್ರಾಯೋಗಿಕ ಪರೀಕ್ಷೆ | ಲಿಖಿತ ಪರೀಕ್ಷೆ |
| ಬಿ.ಎಡ್ IV Sem | ಪರೀಕ್ಷಾ ಶುಲ್ಕ- 850/-<br>ಅಂಕಪಟ್ಟಿ ಶುಲ್ಕ -200/-<br>ತೇರ್ಗಡೆ ಪ್ರಮಾಣ ಪತ್ರ ಶುಲ್ಕ ರೂ. 200/-<br>ಪ್ರಾಯೋಗಿಕ ಪರೀಕ್ಷೆ ಶುಲ್ಕ 600/-<br>ಘಟಿಕೋತ್ಸವ ಪ್ರಮಾಣ ಪತ್ರ – 1000/-<br>**ಒಟ್ಟು- 2850/-** | 03.12.18 | 06.12.18 | 09.12.18 | 03.12.18 To 08.12.18 | ಜನೇವರಿ ಎರಡನೇ ವಾರ ರಿಂದ ಪ್ರಾರಂಭ |

1. ಪರೀಕ್ಷಾ ಒಟ್ಟು ಶುಲ್ಕ ಹಾಗೂ ಇತರ ಶುಲ್ಕಗಳನ್ನು ಹೊರತು ಪಡಿಸಿ ಪ್ರತಿ ವಿದ್ಯಾರ್ಥಿನಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಹಾರ್ಡ್‌ಕಾಪಿಗಳನ್ನು ಸಂಬಂಧಪಟ್ಟ ಕಾಲೇಜಿಗಳಿಗೆ ಸಲ್ಲಿಸುವಾಗ ಪ್ರತಿ ವಿದ್ಯಾರ್ಥಿನಿಯು ರೂ.20/- ಗಳನ್ನು ಕಾಲೇಜಿಗೆ ಪಾವತಿಸಬೇಕು. ಕಾಲೇಜಿನ ಪ್ರಾಚಾರ್ಯರು ರೂ.20/- ಗಳನ್ನು ಪರೀಕ್ಷಾ ಸಾದಿಲ್ವಾರು ವೆಚ್ಚವಾಗಿ ಬಳಸಿಕೊಳ್ಳಲು ತಿಳಸಲಾಗಿದೆ.

a) ಪ್ರಾಂಶುಪಾಲರು, ತಮ್ಮ ಕಛೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರದಾಗಿರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡುವಂತೆ ಕೋರಲಾಗಿದೆ.

b) ಎರಡಕ್ಕಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣರಾದರೆ ಪೂರ್ತಿ ಶುಲ್ಕ ಭರಿಸಬೇಕು.

**ಪರೀಕ್ಷೆಗೆ ಹಾಜರಾಗಬಯಸುವ ವಿದ್ಯಾರ್ಥಿನಿಯರಿಗೆ ಸೂಚನೆಗಳು:**

1. ಪರೀಕ್ಷಾ ಕೇಂದ್ರದ ಬದಲಾವಣೆಗೆ ಅವಕಾಶವಿರುವದಿಲ್ಲ.
2. ಯಾವುದೇ ಪರಿಸ್ಥಿತಿಯಲ್ಲಿ ಅಧಿಸೂಚನೆಯಲ್ಲಿ ನಿಗದಿಪಡಿಸಿ ತಿಳಿಸಿದ ಕೊನೆಯ ದಿನಾಂಕ ಮುಗಿದ ನಂತರ ಬಂದಂತಹ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸಲಾಗುವದಿಲ್ಲ.
3. ವಿದ್ಯಾರ್ಥಿನಿಯರ ಪರೀಕ್ಷಾ ಯಾದಿಯನ್ನು ವಿಶ್ವವಿದ್ಯಾಲಯಕ್ಕೆ ಪ್ರಾಂಶುಪಾಲರ ಮುಖಾಂತರವೇ ಸಲ್ಲಿಸತಕ್ಕದ್ದು.
4. ವಿದ್ಯಾರ್ಥಿನಿಯರು ಪರೀಕ್ಷೆಯಲ್ಲಿ ತಮ್ಮ ಉತ್ತರಗಳನ್ನು ಕೇವಲ ಇಂಗ್ಲೀಷ ಇಲ್ಲವೇ ಕನ್ನಡ ಮಾಧ್ಯಮದಲ್ಲಿ ಬರೆಯಬೇಕು. ಇದು ಭಾಷಾ ವಿಷಯಗಳಿಗೆ ಅನ್ವಯವಾಗುವದಿಲ್ಲ.ಬೇರೆ ಮಾಧ್ಯಮದಲ್ಲಿ ಬರೆದರೆ ಅಂತಹ ವಿದ್ಯಾರ್ಥಿನಿಯರ ಉತ್ತರ ಪತ್ರಿಕೆಯ ಮೌಲ್ಯಮಾಪನವನ್ನು ಮಾಡಲಾಗುವುದಿಲ್ಲ.
5. ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳು ಮುಂದೂಡಲ್ಪಟ್ಟಲ್ಲಿ ಶುಲ್ಕ ಪಾವತಿಸುವ ದಿನಾಂಕಗಳು ಬದಲಾವಣೆ ಯಾಗುವದಿಲ್ಲ.
6. ಪರೀಕ್ಷಾ ಶುಲ್ಕವನ್ನು ಒಮ್ಮೆ ಪಾವತಿ ಮಾಡಿದ ನಂತರ ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಮರು ಪಾವತಿ ಮಾಡಲಾಗುವದಿಲ್ಲ.

## ಎಲ್ಲ ಪ್ರಾಂಶುಪಾಲರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ಸೂಚನೆ

1. ವಿದ್ಯಾರ್ಥಿಗಳು Online ಮುಖಾಂತರ ಅರ್ಜಿಸಲ್ಲಿಸಲು logisys.net.in/studentportal/. ನಲ್ಲಿ login ಆಗಿ ನೋಂದಣಿ ಸಂಖ್ಯೆ, ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರವಾರು/ವಿಷಯವಾರು ಗುರುತುಮಾಡಿದ ನಂತರ ಶುಲ್ಕದ ವಿವರಗಳುಳ್ಳ ಅರ್ಜಿ ಮುದ್ರಿಸಿ ಅಂಚೆ ಕಛೇರಿಯಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ವಿದ್ಯಾರ್ಥಿನಿಯರು ಮಹಾವಿದ್ಯಾಲಯದಲ್ಲಿ ಸಲ್ಲಿಸಬೇಕು.

(ಈ ಹಿಂದೆ ಪರೀಕ್ಷಾ ವಿಭಾಗದ ಆನ್‌ಲೈನಲ್ಲಿ ಪರೀಕ್ಷಾ ಅರ್ಜಿ, ಫಲಿತಾಂಶ, ಮರುಸಂಕಲನ,ಮರುಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆಯ ಪ್ರತಿ ಪಡೆಯಲು ಸಾಮಾನ್ಯವಾಗಿ ಅರ್ಜಿ ಸಲ್ಲಿಸಲು ಅವಕಾಶ ನಿಡಲಾಗಿತ್ತು ಆದರೆ ವಿದ್ಯಾರ್ಥಿಗಳ ಹಿತದ್ರುಷ್ಟಿ ಹಾಗೂ ಸದರಿ ವಿದ್ಯಾರ್ಥಿಗಳ ವಿವರದ ಗೌಪ್ಯತೆ, ಸುರಕ್ಷತೆಗಾಗಿ ವಿಶ್ವವಿದ್ಯಾಲಯವು ಪ್ರತಿ ವಿದ್ಯಾರ್ಥಿಗೆ ಪರೀಕ್ಷಾ ವಿಭಾಗ ಅಂತರ್ಜಾಲದಲ್ಲಿ ವಯಕ್ತಿಕವಾಗಿ USER ID ಮತ್ತು PASSWORD ಕ್ರೀಯೆಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸದರಿ USER ID ಮತ್ತು PASSWORD ನಿಂದ ಲಾಗಿನ್ ಆಗಿ ವಿದ್ಯಾರ್ಥಿಯು ಪರೀಕ್ಷಾ ವಿಭಾಗಕ್ಕೆ ಸಂಭಂದಿಸಿದ ಪರೀಕ್ಷಾ ಅರ್ಜಿ ಫಲಿತಾಂಶ, ಮರು ಸಂಕಲನ, ಮರು ಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆಯ ಪ್ರತಿ ಪಡೆಯಲು ಹಾಗೂ ಇತರೆ ಪರೀಕ್ಷಾ ಕಾರ್ಯಗಳಿಗೆ ಸಂಭಂಧಿಸಿದ ಮಾಹಿತಿಯನ್ನು ಪಡೆಯಬಹುದಾಗಿದೆ.)

USER ID ಮತ್ತು PASSWORD ಗಳನ್ನು Create ಮಾಡುವ ವಿಧಾನ

| | |
|---|---|
| Kswu.ac.in | |
| ↓ | |
| Logisys.net.in/studentportal | Click |
| ↓ | |
| Student Login | Click |
| ↓ | |
| Student Portel | Click |
| ↓ | |
| New User? Registration | Click |
| Registration | |
| Mobile Number | Enter Mobile Number |
| e-mail id | Enter E-Mal Id |
| State | Karnataka |
| Register Number/ Roll No | Enter Register Number/ Roll No |
| Date Of Birth | Enter Date Of Birth |
| Password | Enter Password |
| Conform Password | Conform Password |
| ↓ | |
| Validate | Click |
| ↓ | |
| Sent OTP | Click |

Click ಮಾಡಿದ ನಂತರ ವಿದ್ಯಾರ್ಥಿಯ ಮೊಬೈಲ ನಂಬರ ಹಾಗೂ ಇ-ಮೇಲ್ id ಗೆ ಬರುವ OTP (One Time Password) ನಮೋದಿಸಿದ ನಂತರ ಸದರಿ ವಿದ್ಯಾರ್ಥಿಯ USER IDಯು ನೋಂದಣಿಯಾಗುತ್ತದೆ ಸದರಿ USER ID ಮತ್ತು PASSWORD ನ್ನು ಬಳಸಿವಿದ್ಯಾರ್ಥಿಯು ಪರೀಕ್ಷಾ ವಿಭಾಗಕ್ಕೆ ಸಂಭಂಧಿಸಿದ ಪರೀಕ್ಷಾ ಅರ್ಜಿ ಫಲಿತಾಂಶ,ಮರು ಸಂಕಲನ, ಮರು ಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆಯ ಪ್ರತಿ ಪಡೆಯಲು ಅರ್ಜಿ ಹಾಗೂ ಇತರೆ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಬಹುದಾಗಿದೆ. ವಿದ್ಯಾರ್ಥಿಯು USER ID ಮತ್ತು PASSWORD ನ್ನು ಮರೆತಲ್ಲಿ ಕೆಳಗಿನ ಸಹಾಯವಾಣಿಯನ್ನು ಸಂಪರ್ಕಿಸಬಹುದಾಗಿದೆ.

ಸೂಚನೆ: 1.ವಿದ್ಯಾರ್ಥಿಯು ಒಮ್ಮೆ ನೋಂದಣಿ ಮಾಡಲು ಬಳಸಿದ ಮೊಬೈಲ ನಂಬರ ಹಾಗೂ ಇ-ಮೇಲ್ ನ್ನು ಬೇರೆ ವಿದ್ಯಾರ್ಥಿಗಳು ಬಳಸುವಂತಿಲ್ಲ.

2.ಹೆಚ್ಚಿನ ವಿವರಗಳಿಗೆ ಹಾಗೂ ತಾಂತ್ರಿಕ ಸಲಹೆಗೆ ಸಹಾಯವಾಣಿ ಸಂಖ್ಯೆ 9742428898, 08352-229123 ಸಂಪರ್ಕಿಸಲು ಸೂಚಿಸಲಾಗಿದೆ. E-mail id kswu.logisys@gmail.com

2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಯಾವುದೇ ವಯಕ್ತಿಕ ಖಾತೆಯಿಂದ ಬ್ಯಾಂಕಿಂಗ್ ಮೂಲಕ ನೇರವಾಗಿ ಹಣ ಪಾವತಿಸಬಾರದು, ಆನಲೈನ್ ನಲ್ಲಿ ಚಲನ್ ಮುದ್ರಿಸಿಕೊಂಡು ಅಂಚೆ ಕಛೇರಿ ಮುಖಾಂತರ ಶುಲ್ಕ ಪಾವತಿಸಿದ ನಂತರ ಸಂಬಂದಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ಕಾಲೇಜಿಗೆ ಸಲ್ಲಿಸಬೇಕು, ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವದಿಲ್ಲ.

3. ವಿದ್ಯಾರ್ಥಿನಿಯರು ಆನಲೈನ್ನಲ್ಲಿ ಅರ್ಜಿ ಸಲ್ಲಿಸುವಾಗ ತಾವು ವ್ಯಾಸಂಗ ಮಾಡುತ್ತಿರುವ ಕೊರ್ಸು,ಸೆಮಿಸ್ಟರ, ಹಾಗೂ ಆಯ್ಕೆಮಾಡಿಕೊಂಡ ವಿಷಯಗಳನ್ನು ತಪ್ಪಿಲ್ಲದಂತೆ ಅರ್ಜಿಯಲ್ಲಿ ನಮೂದಿಸತಕ್ಕದ್ದು ತಪ್ಪಿದಲ್ಲಿ ವಿದ್ಯಾರ್ಥಿನಿಯರೇ ಇದಕ್ಕೆ ಹೊಣೆಗಾರರು ಮತ್ತು ಕಾಲೇಜಿನ ಪ್ರಾಂಶುಪಾಲರು ಇದನ್ನು ಗಮನಿಸತಕ್ಕದ್ದು.

## ಪ್ರಾಚಾರ್ಯರಿಗೆ ಸೂಚನೆಗಳು

1. ಕುಲಸಚಿವರು(ಆಡಳಿತ) ಶೈಕ್ಷಣಿಕ ವಿಭಾಗದಿಂದ ಪ್ರವೇಶಾತಿ ಅನುಮೋದನೆ ಆಗದೇ ಹಾಗೂ ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿನಿಯರು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.

2. ಪ್ರವೇಶ ಪಡೆದ ವಿದ್ಯಾರ್ಥಿನಿಯರ ಮಾಹಿತಿಯನ್ನು ಆನ್‌ಲೈನ ಮುಖಾಂತರ ಸಲ್ಲಿಸಬೇಕು. ಹಾಗೂ ಹಾರ್ಡ ಕಾಫಿ ಮತ್ತು ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ಕಡ್ಡಾಯವಾಗಿ ವಿದ್ಯಾರ್ಥಿನಿಯರು ತಮ್ಮ ಕಾಲೇಜಿಗೆ ಸಲ್ಲಿಸಬೇಕು.

3. ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿನಿಯರ ಪ್ರವೇಶ ಪತ್ರವನ್ನು(Hall Ticket) ಆನ್‌ಲೈನ ಮುಖಾಂತರ ಡೌನಲೋಡ ಮಾಡಿಕೊಂಡು ಸಹಿಮಾಡಿ ವಿದ್ಯಾರ್ಥಿನಿಯರಿಗೆ ಕೊಡಬೇಕು.

4. ಪರೀಕ್ಷಾ ಶುಲ್ಕ ವಿನಾಯಿತಿ ನೀಡಿದ ಪ.ಜಾ/ಪ.ಪಂ ವಿದ್ಯಾರ್ಥಿನಿಯರ ಪಟ್ಟಿಗಳನ್ನು ವರ್ಗವಾರು ಪ್ರತ್ಯೇಕವಾಗಿ ತಯಾರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.

5. ತಮ್ಮ ಮಹಾವಿದ್ಯಾಲಯಕ್ಕೆ ಬೇಕಾಗುವ ರಿಪಿಟರ್ಸ ಓಲ್ಡ ಸ್ಕೀಮ ವಿದ್ಯಾರ್ಥಿನಿಯರ ಪ್ರಶ್ನೆ ಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು ವಿಷಯವಾರು ಹಾಗೂ ಸೆಮಿಸ್ಟರವಾರು (ದ್ವಿಪ್ರತಿಗಳಲ್ಲಿ) ಈ ಕಛೇರಿಗೆ **ದಿನಾಂಕ 15-12-2018** ರೊಳಗಾಗಿ ಹಾರ್ಡ ಕಾಪಿ ಸಾಪ್ಟ ಕಾಪಿ ಕಳುಹಿಸಲು ಕೋರಲಾಗಿದೆ. ಈ ಮಾಹಿತಿಯು ಸಕಾಲಕ್ಕೆ ತಲುಪದೆ ಹೋದಲ್ಲಿ ಅಥವಾ ದೋಷಪೂರ್ಣ ಮಾಹಿತಿ ಇದ್ದಲ್ಲಿ ಅದರಿಂದ ಆಗುವ ತೊಂದರೆಗಳಿಗೆ ಸಂಬಂಧಪಟ್ಟ ಮಹಾವಿದ್ಯಾಲಯದ ಪ್ರಾಂಶುಪಾಲರೇ ನೇರವಾಗಿ ಹೋಣೆಗಾರರಾಗುತ್ತಾರೆ.

6. ಪ್ರಾಂಶುಪಾಲರು, ತಮ್ಮ ಕಛೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರದಾಗಿರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡುವಂತೆ ವಿನಂತಿಸಲಾಗಿದೆ.

7. ಸೈದ್ಧಾಂತಿಕ ಪರೀಕ್ಷೆ ನಡೆಸಲು ಬೇಕಾದ ಉತ್ತರ ಪತ್ರಿಕೆ ಬೇಡಿಕೆಯನ್ನು ಶ್ರೀ ಎಮ್.ಆಯ್ ಬಾಗಾಯತ, ವಿಷಯ ನಿರ್ವಾಹಕರು ಪರೀಕ್ಷಾ ವಿಭಾಗ ಇವರಿಗೆ ದಿನಾಂಕ 15-12-2018 ರೊಳಗಾಗಿ ತಲುಪಿಸಲು ಸೂಚಿಸಿದೆ. ಪರೀಕ್ಷೆಗೆ ಸಂಬಂಧಿಸಿದ ಸುಪರವೈಸರ ಡೈರಿ, ಎ ಫಾರ್ಮ ಇವುಗಳನ್ನು ಆನಲೈನ್ ಮುಖಾಂತರ ಪಡೆದುಕೊಳ್ಳಲು ತಿಳಿಸಲಾಗಿದೆ ಹಾಗೂ ಹಾಗೂ ತಮ್ಮ ಕಾಲೇಜಿನಲ್ಲಿ ಸ್ಟಾಕ ಇರುವ ಉತ್ತರ ಪತ್ರಿಕೆಗಳ ಮಾಹಿತಿಯನ್ನು ಪರೀಕ್ಷಾ ವಿಭಾಗಕ್ಕೆ ಕಳುಹಿಸಿ ಕೊಡಬೇಕು.

8. **ಬಾರ ಕೊಡ ಹೊಂದಿದ ಹೊಸ ಉತ್ತರ ಪತ್ರಿಕೆಗಳನ್ನು ಮಾತ್ರ ಬಳಸಬೇಕು. ಹಳೆಯ ಉತ್ತರ ಪತ್ರಿಕೆಗಳನ್ನು ಯಾವುದೇ ಕಾರಣಕ್ಕು ಬಳಸುವಂತಿಲ್ಲ**

9. **ಆನಲೈನಲ್ಲಿ ನೀಡಿರುವ ವಿದ್ಯಾರ್ಥಿನಿಯರ ಯಾದಿಯನ್ನು(Candidate List) ಕೋರ್ಸ ವಾರು ಪ್ರತ್ಯೇಕವಾಗಿ 3ಸೆಟ್ ಝುರಾಕ್ಸ ಪ್ರತಿಗಳನ್ನು ವಿಶ್ವವಿದ್ಯಾಲಯಕ್ಕೆ ತಪ್ಪದೆ ಸಲ್ಲಿಸಲು ಸೂಚಿಸಲಾಗಿದೆ. ಹಾಗೂ ವಿದ್ಯಾರ್ಥಿನಿಯರು ಆನಲೈನ್ ನಲ್ಲಿ ತುಂಬಿದ ಅರ್ಜಿಗಳನ್ನು ತಮ್ಮ ಕಾಲೇಜಿನಲ್ಲಿಯೇ ಸಂರಕ್ಷಿಸಿಟ್ಟುಕೊಂಡು ನಂತರ ವಿಶ್ವವಿದ್ಯಾಲಯಕ್ಕೆ ಅಗತ್ಯವಿದ್ದಾಗ ಕಳುಹಿಸಿಕೊಡಲು ಕೋರಲಾಗಿದೆ.**

10. ಆಂತರಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ತಮ್ಮ ಕಾಲೇಜಿನಲ್ಲಿಯೇ ಸಂರಕ್ಷಿಸಿಟ್ಟುಕೊಂಡು ನಂತರ ವಿಶ್ವವಿದ್ಯಾಲಯಕ್ಕೆ ಅಗತ್ಯವಿದ್ದಾಗ ಕಳುಹಿಸಿಕೊಡಲು ಕೋರಲಾಗಿದೆ.

11. ಯಾವುದೇ ವಿದ್ಯಾರ್ಥಿನಿಯರ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸದೇ ಬಿಟ್ಟುಹೋದಲ್ಲಿ ಯಾವುದೇ ಕಾರಣಕ್ಕೂ ಹಾರ್ಡಕಾಪಿಯನ್ನು ನಂತರ ಕಾಲೇಜಿನಿಂದ ಕಳುಹಿಸಿಕೊಟ್ಟಲ್ಲಿ ಅದನ್ನು ಪರಗಣಿಸಲಾಗುವುದಿಲ್ಲ ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.

**ವಿಶೇಷ ಮಾಹಿತಿ**

1. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ- I ಗುಂಪಿಗೆ ಸೇರಿದ ವಿದ್ಯಾರ್ಥಿನಿಯರ ಪರೀಕ್ಷಾ ಶುಲ್ಕ ಪಾವತಿ ಮಾಡಲು ವಿನಾಯತಿ ಇರುತ್ತದೆ. ಆದರೆ, ಪರೀಕ್ಷಾ ಅರ್ಜಿ ಅಂಕಪಟ್ಟಿ ಶುಲ್ಕ ಪಾಸಿಂಗ್ ಸರ್ಟಿಫಿಕೇಟ್ ಮತ್ತು ಅರ್ಜಿ ಪರಿಶೀಲನಾ ಶುಲ್ಕ ಪಾವತಿ ಮಾಡಬೇಕಾಗುತ್ತದೆ. ಸದರಿ ವಿದ್ಯಾರ್ಥಿನಿಯರ ಪರೀಕ್ಷಾ ಶುಲ್ಕವನ್ನು ಆಯಾ ಸರಕಾರಿ ಇಲಾಖೆಯಿಂದ ಪಡೆದು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡುವ ಜವಾಬ್ದಾರಿ ಸಂಬಂಧಪಟ್ಟ ಪ್ರಾಂಶುಪಾಲರ ಹೊಣೆಯಾಗಿರುತ್ತದೆ. ಒಂದು ವೇಳೆ ಸಂದಾಯ ಮಾಡದಿದ್ದಲ್ಲಿ ಆ ಹಣವನ್ನು ಆಯಾ ಮಹಾವಿದ್ಯಾಲಯದಿಂದ ಭರಿಸಿಕೊಳ್ಳಲಾಗುವದು. ಶುಲ್ಕ ವಿನಾಯತಿ ಪಡೆದ ವಿದ್ಯಾರ್ಥಿನಿಯರ ವಿವರಗಳನ್ನೊಳಗೊಂಡ ಪಟ್ಟಿಯ ಒಂದು ಪ್ರತಿಯನ್ನು ಈ ವಿಭಾಗಕ್ಕೂ ಸಲ್ಲಿಸಬೇಕು.

2. ಪ್ರವರ್ಗ-3 (ಬಿ) ಹಾಗೂ ಸಾಮಾನ್ಯ ಗುಂಪಿಗೆ ಸೇರಿದ ವಿದ್ಯಾರ್ಥಿನಿಯರ ಪ್ರತ್ಯೇಕ ಪಟ್ಟಿಯನ್ನು (ದ್ವಿಪ್ರತಿಗಳಲ್ಲಿ) ಶುಲ್ಕದ ವಿವರಗಳನ್ನೊಳಗೊಂಡಂತೆ ಒಂದು ಪ್ರತಿಯನ್ನು ಕುಲಸಚಿವರು ( ಮೌಲ್ಯಮಾಪನ), ಹಾಗೂ ಇನ್ನೊಂದು ಪ್ರತಿಯನ್ನು ವಿತ್ತಾಧಿಕಾರಿಗಳು,ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇವರಿಗೆ ಕಳುಹಿಸಿಕೊಡತಕ್ಕದ್ದು.

ಕುಲಸಚಿವರು (ಮೌಲ್ಯಮಾಪನ)
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ
**ವಿಜಯಪುರ**

ಗೆ,

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ಒಳಪಡುವ ಎಲ್ಲಾ ಮಹಿಳಾ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

1. ಆಪ್ತಶಾಖೆ, ಮಾನ್ಯಕುಲಪತಿಗಳು, ಕುಲಸಚಿವರು(ಆಡಳಿತ ವಿಭಾಗ), ಕುಲಸಚಿವರು(ಪರೀಕ್ಷಾ ವಿಭಾಗ), ಹಣಕಾಸು ಅಧಿಕಾರಿಗಳು, ಅ.ಮ.ಮ.ವಿಶ್ವವಿದ್ಯಾನಿಲಯ, ವಿಜಯಪುರ.
2. ಎಲ್ಲಾ ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಅ.ಮ.ಮ.ವಿಶ್ವವಿದ್ಯಾನಿಲಯ, ವಿಜಯಪುರ.
3. ಕಛೇರಿ ಪ್ರತಿ.